ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

ಕರ್ನಾಟಕ ಅರಣ್ಯ ಇಲಾಖೆ

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಕೆನರಾ ವೃತ್ತ, ಶಿರಸಿ – ೫೮೧ ೪೦೨
OFFICE OF THE CHIEF CONSERVATOR OF FORESTS, KANARA CIRCLE, SIRSI-581402.
ದೂರವಾಣಿ (PHONE): 08384-236335, ಇ-ಮೇಲ್ (e_mail) : ccfkanaracircle@gmail.com

ಸಂಖ್ಯೆ: ಎ1/ಸಿಬ್ಬಂದಿ/ಅ.ವೀ/ನೇರ ನೇಮಕಾತಿ/ಸಿಆರ್-11/2023-24. ದಿನಾಂಕ: 04/03/2025

ಇವರಿಗೆ,

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
(ಮಾಹಿತಿ ಸಂವಹನ ಮತ್ತು ತಂತ್ರಜ್ಞಾನ)
``ಅರಣ್ಯ ಭವನ", ಮಲ್ಲೇಶ್ವರಂ,
ಬೆಂಗಳೂರು-03.

ಮಾನ್ಯರೇ.,

ವಿಷಯ: 2023-24ನೇ ಸಾಲಿನಲ್ಲಿ ಕೆನರಾ ವೃತ್ತದ 32 (ಮೂವತ್ತೆರಡು) ಅರಣ್ಯ ವೀಕ್ಷಕ ಗ್ರೂಪ್ 'ಡಿ' ಹುದ್ದೆಗಳಿಗೆ ನೇರ ನೇಮಕಾತಿ ಸಂಬಂದಿಸಿದಂತೆ ತಾತ್ಕಾಲಿಕ ಕಾಯುವಿಕೆ (Waiting List) ಪಟ್ಟಿಯನ್ನು ಇಲಾಖಾ ವೆಬ್-ಸೈಟ್ ನಲ್ಲಿ ಪ್ರಕಟಿಸುವ ಕುರಿತು

ಉಲ್ಲೇಖ: ಈ ಕಚೇರಿ ಪ್ರಕಟಣೆ ದಿನಾಂಕ; 04/03/2025

_0_

ಉಲ್ಲೇಖಿತ ಈ ಕಚೇರಿ ಪ್ರಕಟಣೆಯನ್ವಯ 2023-24ನೇ.ಸಾಲಿನಲ್ಲಿ ಕೆನರಾ ವೃತ್ತದ 32 (ಮೂವತ್ತೆರಡು) ಅರಣ್ಯ ವೀಕ್ಷಕ ಗ್ರೂಪ್ 'ಡಿ' ಹುದ್ದೆಗಳಿಗೆ ನೇರ ನೇಮಕಾತಿ ಸಂಬಂದಿಸಿದಂತೆ ತಾತ್ಕಾಲಿಕ ಕಾಯುವಿಕೆ (Waiting List) ಪಟ್ಟಿಯನ್ನು ತಯಾರಿಸಲಾಗಿದ್ದು, ಅದನ್ನು https://aranya.gov.in ದಲ್ಲಿ <u>ನೇಮಕಾತಿ</u> (Recruitment) ಶೀರ್ಷಿಕೆಯಡಿ ಪ್ರಕಟಿಸಲು ಈ ಪತ್ರದೊಂದಿಗೆ ಸದ್ರಿ ಪ್ರಕಟಣೆ ಮತ್ತು ತಾತ್ಕಾಲಿಕ ಕಾಯುವಿಕೆ (Waiting List) ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮಲ್ಲಿ ಗೌರವಪೂರ್ವಕವಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ,

04.03.25
ಅರಣ್ಯ ಸಂರಕ್ಷಣಾಧಿಕಾರಿ,
ಕೆನರಾ ವೃತ್ತ, ಶಿರಸಿ

ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

# ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರ ಕೆನರಾ ವೃತ್ತ, ಶಿರಸಿ-581 402

## 2023-24ನೇ ಸಾಲಿನಲ್ಲಿ 32 ಅರಣ್ಯ ವೀಕ್ಷಕ ಗ್ರೂಪ್ 'ಡಿ' ವೃಂದದ ಹುದ್ದೆಗಳಿಗೆ ನೇರ ನೇಮಕಾತಿ.

## ಪ್ರಕಟಣೆ

ಅಧಿಸೂಚನೆ ಸಂಖ್ಯೆ: ಎ1/ಸಿಬ್ಬಂದಿ/ಅ ವೀ/ ನೇರ ನೇಮಕಾತಿ/ಸಿಆರ್-11/2023-24

ದಿನಾಂಕ: 15/09/2023.

ಕೆನರಾ ವೃತ್ತಕ್ಕೆ ಸಂಬಂಧಿಸಿದಂತೆ ಅಧಿಸೂಚಿಸಲಾದ 32 ಅರಣ್ಯ ವೀಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ ಕುರಿತು ಈ ಕಚೇರಿ ಪ್ರಕಟಣೆ ದಿನಾಂಕ; 15/09/2023 ರ ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ಅರಣ್ಯ ವಿಕ್ಷಕರ ಹುದ್ದೆಗಳಿಗೆ ಪ್ರವರ್ಗವಾರು 1:1 (ಹುದ್ದೆ: ಅಭ್ಯರ್ಥಿ) ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕ; 15/03/2024 ಎಂದು ಪ್ರಕಟಿಸಲಾಗಿರುತ್ತದೆ.

ಸದ್ರಿ ಅಂತಿಮ ಆಯ್ಕೆ ಪಟ್ಟಿಯನುಸಾರ ಕು. ರೇಷ್ಮಾ ಪಿ. ಪಾವದ (ನೊಂದಣಿ ಸಂಖ್ಯೆ: 1158509) ಇವರು ಪರಿಶಿಷ್ಠ ಜಾತಿ ಇತರೇ ಮೀಸಲಾತಿಯಡಿ ಅರಣ್ಯ ವೀಕ್ಷಕ ಹುದ್ದೆಗೆ ಆಯ್ಕೆಯಾಗಿದ್ದು, ವೈಯಕ್ತಿಕ ಕಾರಣಗಳಿಂದಾಗಿ ಅರಣ್ಯ ವೀಕ್ಷಕ ಹುದ್ದೆಯನ್ನು ನಿರಾಕರಿಸಿರುವುದಾಗಿ ಲಿಖಿತ ಮನವಿ ಸಲ್ಲಿಸಿದ ಮೇರೆಗೆ ಈ ಕಚೇರಿ ಆದೇಶ ಸಂಖ್ಯೆ: 44/2024-25, ದಿನಾಂಕ: 08/08/2024 ರಂತೆ ಸದ್ರಿಯವರ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪರಿಶಿಷ್ಠ ಜಾತಿ ಇತರೇ ಮೀಸಲಾತಿಯಡಿ ಬಾಕಿಯಿರುವ ಒಂದು ಹುದ್ದೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: FEE 203 FEG 2015 ದಿನಾಂಕ: 06/08/2019ರ ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು, 2019ರನ್ವಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ತಾತ್ಕಾಲಿಕ ಕಾಯುವಿಕೆ (Waiting List) ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಬೇಕಾಗಿರುತ್ತದೆ.

ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ಹುದ್ದೆಗಳಿಗೆ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಪಡೆದ ಒಟ್ಟು ಅಂಕಗಳ ಮೆರಿಟ್ ಹಾಗೂ ಪ್ರವರ್ಗವಾರು ಮೀಸಲಾತಿ ಆಧಾರದ ಮೇಲೆ ದೈಹಿಕ ತಾಳ್ವಿಕೆ [Physical Endurance Test], ದೈಹಿಕ ಕಾರ್ಯ ಸಮರ್ಥತೆ [Physical Efficiency Test] ಹಾಗೂ ದೇಹ ದಾರ್ಡ್ಯತೆ [Physical Standard Test] ಹಾಗೂ ಪ್ರಾಥಮಿಕ ಹಂತದ ಮೂಲ ದಾಖಲೆಗಳ ಪರಿಶೀಲನೆಯಲ್ಲಿ ಅರ್ಹತೆ ಹೊಂದಿದ ಮತ್ತು ಪ್ರಸ್ತುತ ಚಾಲ್ತಿಯಲ್ಲಿರುವ ಎಲ್ಲಾ ಮೀಸಲಾತಿ ನಿಯಮಗಳ ಅನುಸಾರ ಅರ್ಹತೆ ಹೊಂದಿದ ಅಭ್ಯರ್ಥಿಗಳ ತಾತ್ಕಾಲಿಕ ಕಾಯುವಿಕೆ (Waiting List) ಪಟ್ಟಿಗೆ ಅಭ್ಯರ್ಥಿಯ ಪಟ್ಟಿಯನ್ನು ದಿನಾಂಕ; 04/03/2025 ರಂದು ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಬೇಕಾಗಿರುತ್ತದೆ. ಸದ್ರಿ ತಾತ್ಕಾಲಿಕ ಕಾಯುವಿಕೆ (Waiting List) ಪಟ್ಟಿಗೆ ಅಭ್ಯರ್ಥಿಗಳಿಂದ ಯಾವುದಾದರೂ ಆಕ್ಷೇಪಣೆಗಳಿದ್ದರೇ ದಿನಾಂಕ: 15/03/2025ರ ಸಂಜೆ: 5.30 ಗಂಟೆಯೊಳಗಾಗಿ ಈ ಕಚೇರಿ ಇ-ಮೇಲ್ a1estsection@gmail.com ಗೆ ಸಲ್ಲಿಸತಕ್ಕದ್ದು. ಇದನ್ನು ಹೊರತುಪಡಿಸಿ ಬೇರೆ ವಿಧಾನದ ಮೂಲಕ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲವೆಂದು ತಿಳಿಸಿದೆ. ಹಾಗೂ ಸದ್ರಿ ಕಾಯುವಿಕೆ ಪಟ್ಟಿಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದೇ

ಇದ್ದ ಪಕ್ಷದಲ್ಲಿ ಸದ್ರಿ ಕಾಯುವಿಕೆ (Waiting List) ಪಟ್ಟಿಯನ್ನು ಅಂತಿಮ ಕಾಯುವಿಕೆ (Waiting List) ಪಟ್ಟಿಯೆಂದು ಪ್ರಕಟಿಸಲಾಗುವುದು.

ಸ್ಥಳ: ಶಿರಸಿ

ದಿನಾಂಕ; 04/03/2025

04.03.2025

(ವಸಂತ ರೆಡ್ಡಿ ಕೆ.ವಿ ಭಾ.ಅ.ಸೇ)
ಅರಣ್ಯ ಸಂರಕ್ಷಣಾಧಿಕಾರಿ
ಹಾಗೂ ಆಯ್ಕೆ ಪ್ರಾಧಿಕಾರ
ಕೆನರಾ ವೃತ್ತ, ಶಿರಸಿ.

ಕರ್ನಾಟಕ ಸರ್ಕಾರ,
ಅರಣ್ಯ ಇಲಾಖೆ

ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರ ಕೆನರಾ ವೃತ್ತ, ಶಿರಸಿ-581 402

ಅಧಿಸೂಚನೆ ಸಂಖ್ಯೆ: ಎ1/ಸಿಬ್ಬಂದಿ/ಅ ವೀ/ ನೇರ ನೇಮಕಾತಿ/ಸಿಆರ್-11/2023-24, ದಿನಾಂಕ: 15/09/2023,
32 ಅರಣ್ಯ ವೀಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ.

2023-24ನೇ ಸಾಲಿನಲ್ಲಿ 32 ಅರಣ್ಯ ವೀಕ್ಷಕ ಗ್ರೂಪ್ 'ಡಿ' ವೃಂದದ ಹುದ್ದೆಗಳಿಗೆ ನೇರ ನೇಮಕಾತಿ

ದೈಹಿಕ ತಾಳ್ವಿಕೆ [Physical Endurance Test], ದೈಹಿಕ ಕಾರ್ಯ ಸಮರ್ಥತೆ [Physical Efficiency Test] ಹಾಗೂ ದೇಹ ದಾರ್ಡ್ಯತೆ [Physical Standard Test] ಹಾಗೂ ಪ್ರಾಥಮಿಕ ಹಂತದ ಮೂಲ ದಾಖಲೆಗಳ ಪರಿಶೀಲನೆಯಲ್ಲಿ ಅರ್ಹತೆ ಹೊಂದಿದ ಅಭ್ಯರ್ಥಿಗಳ 1:1 (ಹುದ್ದೆ: ಅಭ್ಯರ್ಥಿ) ಆಯ್ಕೆ ಪಟ್ಟಿಗೆ ತಾತ್ಕಾಲಿಕ ಕಾಯುವಿಕೆ (Waiting List) ಅಭ್ಯರ್ಥಿಗಳ ಪಟ್ಟಿ

| Sl.No | Registration No. | Application No. | Full name of Applicant | Date of Birth | Gender | Percentage | Category Claimed | Selected Category |
|---|---|---|---|---|---|---|---|---|
| **SC-OTHERS** | | | | | | | | |
| 1 | 1224177 | 2811895 | JANAPPA SUMEL METRI | 14-04-2005 | MALE | 94.88 | SC | SC-OTHERS |
| **ST-LOCAL FOREST DWELLING SCHEDULE TRIBES** | | | | | | | | |
| NO ELIGIBLE CANDIDATE IN ST- LOCAL FOREST DWELLING SCHEDULE TRIBES | | | | | | | | |

04.03.2025
ಆಯ್ಕೆ ಪ್ರಾಧಿಕಾರ ಹಾಗೂ
ಅರಣ್ಯ ಸಂರಕ್ಷಣಾಧಿಕಾರಿ,
ಕೆನರಾ ವೃತ್ತ, ಶಿರಸಿ